**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಗಳವರ ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

ಓ ಎಸ್ ನಂ. **223/2022**

ಪಿ ಡಬ್ಲ್ಯೂ: 2

ದಿನಾಂಕ 21-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆಃ ವಾದಿ ಪರಃ ಶ್ರೀ ಎಂ ಎನ್ ವಕೀಲರಿಂದಃ

ನಾನು ದಾವೆಯಲ್ಲಿ ವಾದಿ ಪರ ಸಾಕ್ಷಿ ಇರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಹೇಳಿಕೆ ಸಾಕ್ಷ್ಯ ಪ್ರಮಾಣ ಪತ್ರವನ್ನು ಈಗಾಗಲೇ ದಿನಾಂಕ **19/02/2025** ರಂದು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲಾ ಸತ್ಯವಾಗಿರುತ್ತದೆ. ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಿಪಿ-1 ರ ದಾಖಲೆಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆಂದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-1(ಇ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಬಿಕಲಂದಾರರಾಗಿ ಮಲ್ಲಿಕಾರ್ಜುನ ವಕೀಲರು ಸಹಿ ಮಾಡಿರುತ್ತಾರೆ. ಸದರಿಯವರು ಮೃತ ಪಟ್ಟಿರುತ್ತಾರೆ. ಸದರಿ ದಾಖಲೆಗೆ ರಂಗನಾಥ ಎಂಬುವವರು ಮತ್ತೊಬ್ಬ ಸಾಕ್ಷಿದಾರಾಗಿ ಸಹಿ ಮಾಡಿರುತ್ತಾರೆ. ರಂಗನಾಥರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-1(ಎಫ್) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ 1 ನೇಪ್ರತಿವಾದಿ ಮಂಜಪ್ಪ ಮತ್ತು ಅವರ ಸ್ನೇಹಿತರು ಸಹಿ ಮಾಡಿರುತ್ತಾರೆ. ಸದರಿ 1 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ಈಗಾಗಲೇ

ನಿಪಿ-1(ಎ) ಎಂದು ಗುರುತಿಸಲಾಗಿದೆ. ಸದರಿ ದಾಖಲೆಗೆ 1 ನೇ ಪ್ರತಿವಾದಿಯ ಮಕ್ಕಳು ಸಹ ಸಹಿ ಮಾಡಿರುತ್ತಾರೆ.

<u>ಪಾಟೀ ಸವಾಲುಃ ಪ್ರತಿವಾದಿ ಪರಃ</u>

ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.